

# ದುಬಾರಿ ಬೈಕ್

ಸ್ವಿಝರ್ಲ್ಯಂಡ್ ಮೂಲದ ಫೆಲ್ಟೈನ್ ಮೋಟರ್ ಸೈಕಲ್ ಕಂಪೆನಿಯು ಇತ್ತೀಚೆಗೆ ಅತ್ಯಾಧುನಿಕ ಡಿಲಕ್ಸ್ ಮೋಟರ್ ಸೈಕಲ್ ಅನ್ನು ಬಿಡುಗಡೆ ಮಾಡಿದೆ. ಫೆಲ್ಟೈನ್ ಒನ್ ಎಂಬ ಹೆಸರಿನ ಈ ಬೈಕ್ ಅನ್ನು ಡಿಸೈನ್ ಮಾಡಿದ್ದು ಹೆಸರಾಂತ ಡಿಸೈನರ್ ಯಾಕೂಬ. ಭವಿಷ್ಯತ್ತಿನಲ್ಲಿ ಬರಲಿರುವ ಈ ಬೈಕ್ ಅಂತಿಂಥದ್ದಲ್ಲ. ಇಡೀ ವಿಶ್ವದಲ್ಲೇ ಅತ್ಯಂತ ದುಬಾರಿ ಬೈಕ್ ಎಂಬ ಖ್ಯಾತಿ ಗಳಿಸಲಿದೆ. ಕೇವಲ 50 ಬೈಕ್‌ಗಳಷ್ಟೇ ತಯಾರಾಗಲಿದ್ದು ಒಂದು ಬೈಕ್‌ನ ಬೆಲೆ 280,000 ಡಾಲರ್ ಅಂದರೆ ಸುಮಾರು 1.75 ಕೋಟಿ ರೂಪಾಯಿ.

ಫೆಲ್ಟೈನ್ ಒನ್‌ನ ವಿಶೇಷತೆ ಏನು ಗೊತ್ತೇ? ಈ ಬೈಕ್ ಅನ್ನು ಉತ್ಕೃಷ್ಟ ದರ್ಜೆಯ ವಸ್ತು ಅಂದರೆ ಕಾರ್ಬನ್, ಟೈಟಾನಿಯಮ್, ವಿಮಾನ ತಯಾರಿಸಲು ಬಳಸುವ ಅಲ್ಯುಮಿನಿಯಂ, ಉತ್ತಮ ಗುಣಮಟ್ಟದ ಲೆದರ್ (ಚರ್ಮ) ಮುಂತಾದವುಗಳನ್ನು ಬಳಸಿ ತಯಾರಿಸಲಾಗಿದೆ. ಸತತ ನಾಲ್ಕು ವರ್ಷಗಳ ಕಾಲ ತಾಂತ್ರಿಕ ಸಂಶೋಧನೆ ಫಲವಾಗಿ ಈ ಬೈಕ್ ರೂಪುಗೊಂಡಿದೆ, ಹಾಗೂ ಶಕ್ತಿಶಾಲಿಯಾದ ಮುಂದಿನ ಫೋರ್ಕ್ ಮತ್ತು ಹುಕ್ ಆಕಾರದ ಹಿಂಭಾಗವನ್ನು ಹೊಂದಿದೆಯೆಂದು ಕಂಪನಿ ಹೇಳುತ್ತದೆ. ಫೆಲ್ಟೈನ್, ಕೇವಲ ಬೈಕ್ ಮಾತ್ರವಲ್ಲ, ಅತ್ಯಾಧುನಿಕ ತಾಂತ್ರಿಕತೆ ಮತ್ತು ಹೊಸತನವೆರಡೂ ಮೇಳೈಸಿರುವ ಹಾಗೂ ನಾವೀನ್ಯತೆ ಹಾಗೂ ವೈಶಿಷ್ಟ್ಯತೆ ಬಯಸುವ ಗ್ರಾಹಕ ಬೇಡಿಕೆಯಿಂದಾಗಿ ತಯಾರಾಗಿದೆ ಎಂದು ಯಾಕೂಬ ನುಡಿಯುತ್ತಾರೆ.

ಫೆಲ್ಟೈನ್ ಮೂರು ಸಿಲಿಂಡರ್‌ನ ಎಂಜಿನ್, 6–ಸ್ಪೀಡ್ ಗೇರ್ ಬಾಕ್ಸ್ ಇದ್ದು 801 ಸಿ ಸಿ ಪವರ್ ಹೊಂದಿದೆ ಮತ್ತು 155 ಕಿಲೋಗ್ರಾಮ್‌ಗಳಷ್ಟು ತೂಕವನ್ನು ಹೊಂದಿದೆ. ಈಗಲೇ ಕೊಂಡುಕೊಳ್ಳೋಣವೆಂದು ಯೋಚಿಸುತ್ತಿದ್ದೀರಾ? ಸ್ವಲ್ಪ ಸಮಯ ತಾಳಿ, ಫೆಲ್ಟೈನ್ ಮಾಡೆಲ್ ಬಿಡುಗಡೆಯಾಗುತ್ತಿರುವುದು 2016ರಲ್ಲಿ.

■ ವಿನಯ್‌ಕುಮಾರ್ ಬಿ.ಹೆಚ್.



